ಬದಲಾವಣೆಯ ನೀರು ಜರ್ಮನಿಯಲ್ಲಿ ಸಾಕಷ್ಟು ಹರಿದಿದ್ದರೂ ಅಮೆರಿಕ ಮತ್ತು ಯುರೋಪಿನ ಇತರ ದೇಶಗಳಿಗಿಂತ ಜರ್ಮನಿಯ ಜನಜೀವನ ಭಿನ್ನವಾದುದು, ಅತಿ ಶಿಸ್ತಿನಿಂದ ಕೂಡಿರುವಂತಹದ್ದು. ಮ್ಯೂನಿಕ್ ನಗರದ ನೆನಪುಗಳ ನೆಪದಲ್ಲಿ ಅಲ್ಲಿನ ಜನರ ಮನೋಧರ್ಮದ ಬಗ್ಗೆ ಗಮನಸೆಳೆಯುವ ಈ ಬರಹ, ಜರ್ಮನ್ನರ ವಿಶಿಷ್ಟ ವ್ಯಕ್ತಿತ್ವವನ್ನು ಚಿತ್ರಿಸುತ್ತದೆ; ಪ್ರವಾಸಿ ಆಕರ್ಷಣೆಗಳು ಗೌಣವಾಗಿ ಜನಜೀವನದ ವಿವರಗಳಿಗೆ ಹೆಚ್ಚು ಒತ್ತುನೀಡುವ ಪ್ರವಾಸಕಥನದ ಮಾದರಿಯಾಗಿಯೂ ಗಮನಸೆಳೆಯುತ್ತದೆ.

■ ರಹಮತ್ ತರೀಕೆರೆ

# ಮ್ಯೂನಿಕ್ ನೆನಪುಗಳು



ನಾವು, ಮ್ಯೂನಿಕ್ಕಿಗೆ ಹೋದಾಗ ಮಳೆಗಾಲ ಮುಗಿಯುತ್ತಾ ಬಂದಿತ್ತು. ಆದರೂ ಆಗಸವನ್ನು ಮಳೆಮೋಡ ಕವಿದಿರುತ್ತಿದ್ದವು. ಒಂದೇ ದಿನದಲ್ಲಿ ಬಿಸಿಲು ಚಳಿ ಮಳೆಗಳು ದರ್ಶನ ಕೊಡುತ್ತಿದ್ದವು. ಒಮ್ಮೆ ಸಣ್ಣಗೆ ಹಿಮಪಾತವೂ ಆಯಿತು. ಮ್ಯೂನಿಕ್ ಜರ್ಮನಿಯ ಹಿಮಪರ್ವತ ಪ್ರದೇಶದಲ್ಲಿರುವ ನಗರ. ಅದರ ನಾಯ್‌ಪರ್ಲಾಕ್ ಪ್ರದೇಶದಲ್ಲಿ ನಮ್ಮ ಬಿಡಾರ. ಅದು ಕಾರ್ಲ್‌ಮಾರ್ಕ್ಸ್ ಮುಖ್ಯರಸ್ತೆಗೆ ಹೊಂದಿಕೊಂಡಂತಿದ್ದ ಬ್ರೆಕ್ಟ್ ಬೀದಿಯಲ್ಲಿತ್ತು. ಭಾರತೀಯ ರಾಜಕಾರಣ ಚಳವಳಿ ಸಾಹಿತ್ಯಗಳ ಮೇಲೆ ಪ್ರಭಾವ ಬೀರಿರುವ ತತ್ವಶಾಸ್ತ್ರಜ್ಞ ಹಾಗೂ ನಾಟಕಕಾರರ ಈ ಹೆಸರು, ಸಾಹಿತ್ಯ ಮತ್ತು ರಾಜಕಾರಣದ ವಿದ್ಯಾರ್ಥಿಯಾದ ನನ್ನೊಳಗೆ ಆಪ್ತಭಾವ ಉಂಟುಮಾಡಿದವು. ನಾಯ್‌ಪರ್ಲಾಕ್ ಪ್ರದೇಶದಿಂದ ಆಗಸವು ನಿಚ್ಚಳವಾದ ಹೊತ್ತಲ್ಲಿ ದೂರದ ಆಲ್ಪ್ಸ್ ಪರ್ವತಶ್ರೇಣಿ ಮಸುಕಾಗಿ ಕಾಣುತ್ತಿತ್ತು. ಬಿಡಾರದ ಸುತ್ತ ಗಿಳಿಹಸಿರಿನ ಮ್ಯಾಪಲ್ ಮರಗಳು; ಮರಗಳಿಂದ ಮೈನಾ ಬುಲ್‌ಬುಲ್‌ಗಳ ಕೂಜನ; ಕಿಟಕಿಯಿಂದ ಮುಗಿಲುಗಳ ಆಹ್ಲಾದಕರ ಆಟವನ್ನು ನೋಡಬಹುದಿತ್ತು. ಆದರೆ ಇಲ್ಲಿನ ಸದಾ ಕದಮುಚ್ಚಿದ ಮನೆಗಳೂ, ಕರ್ಫ್ಯೂ ಹೊಡೆದಂತಿರುವ ನಿರ್ಜನ ಬೀದಿಗಳ ಮನಸ್ಸನ್ನು ಮಂಕುಗೊಳಿಸುತ್ತಿದ್ದವು. ಒಂದು ದೇಶದ ಹವಾಮಾನವು, ಜನರ ಆಲೋಚನಾಕ್ರಮ, ಜೀವನವಿಧಾನ ಹಾಗೂ ಸಂಸ್ಕೃತಿಗಳನ್ನು ರೂಪಿಸುತ್ತದೆಯೇ? ದೇಹವನ್ನು ಮುದುಡಿಕೊಂಡು ಮನಸ್ಸನ್ನು ಕೂರ್ಮನಂತೆ ಒಳಗೆಳೆದುಕೊಂಡು ಅಂತರ್ಮುಖಿಗಳಾಗಲು ಚಳಿ ಇಂಬುಕೊಟ್ಟಿದೆಯೇ? ಇದುವೇ ಪಾಶ್ಚಿಮಾತ್ಯರ ಏಕಾಂತಪ್ರಿಯತೆ, ಖಾಸಗಿತನ, ಗಾಂಭೀರ್ಯಗಳಿಗೆ ಕಾರಣವಾಗಿದೆಯೇ? ಇದ್ದೀತು. ಎಂತಲೇ ಬಿಸಿಲುಸೀಮೆಯ ನಾಡುಗಳಿಗೆ ಹೋಲಿಸಿದರೆ, ಚಳಿದೇಶಗಳಲ್ಲಿ ಸಾಮೂಹಿಕ ಭಾಗವಹಿಸುವಿಕೆಯ ಆಚರಣೆಗಳೂ ಕಡಿಮೆ.

ಯೂರೋಪು ಪ್ರವಾಸ ಕಥನಗಳಲ್ಲಿ ಅಲ್ಲಿನ ಶಿಸ್ತು ಮತ್ತು ಅಚ್ಚುಕಟ್ಟುತನಗಳ ಬಗೆಗಿನ ದಂತಕತೆಗಳನ್ನು ನಾನು ಓದಿದ್ದೆ. ಹೀಗಾಗಿ ನಮ್ಮ ಮ್ಯೂನಿಕ್‌ವಾಸ ಆತಂಕದಿಂದಲೇ ಶುರುವಾಯಿತು. ಆದರೆ ಆತಂಕದ ಮೋಡಗಳನ್ನು ಚದುರಿಸುವಂತೆ, ನಮ್ಮ ಹಡೆತನದಿಂದ ಫಜೀತಿ ಆಗಬಾರದು ಎಂದು, ಆತಿಥೇಯರಾದ ಗೌರಿ ದೀಪು, ಮೊದಲ ದಿನವೇ ಜರ್ಮನ್ ನಾಗರಿಕ ಸಮಾಜದ ನಿಯಮಗಳ ಮೇಲೆ ಕ್ಲಾಸು ತೆಗೆದುಕೊಂಡರು. ಅದರ ಮುಖ್ಯಾಂಶಗಳೆಂದರೆ: ರಸ್ತೆಯ ಬಲಗಡೆಯೇ ಸಂಚರಿಸಬೇಕು (ಭಾರತೀಯರು ಎಡಪಥೀಯರಷ್ಟೆ); ಸೈಕಲ್‌ಹಾದಿ ಖಾಲಿಯಿದ್ದರೂ ಪಾದಚಾರಿಗಳು ಹಾಯಬಾರದು; ಹಸಿರು ಸೂಚನೆಯಿಲ್ಲದೆ ರಸ್ತೆ ದಾಟಬಾರದು; ಮೆಟ್ರೋದಲ್ಲಿ ಇಳಿವವರಿಗೆ ಬಾಗಿಲ ನಡುವಣ ತಾವನ್ನು ಬಿಟ್ಟು ಬದಿಗೆ ನಿಲ್ಲಬೇಕು; ಅಂಗಡಿಗಳಲ್ಲಿ ಖರೀದಿಗೆ ಪಾಳಿ ನಿಲ್ಲಬೇಕು; ಫ್ಲಾಟಿನಲ್ಲಿ ಇನ್ನೊಬ್ಬರ ಮನೆ ಬಾಗಿಲ ಮುಂದೆ ಹಾಯುವಾಗ ಸಪ್ಪಳ ಮಾಡಬಾರದು; ಮನೆಯಲ್ಲಿದ್ದಾಗ ನೆಲದ ಮೇಲೆ ಘಟ್ಟಿಸಿ ನಡೆಯಬಾರದು (ಕೆಳಂತಸ್ತಿನವರಿಗೆ ಕಿರಿಕಿರಿಯಾಗುತ್ತದೆ); ಹೊರಗೆ ಕಾಣುವಂತೆ ಬಟ್ಟೆ ಒಣಹಾಕುವಂತಿಲ್ಲ; ರಾತ್ರಿ ಎಂಟರ ಬಳಿಕ ಮಿಕ್ಸಿ ಚಾಲನೆಗೆ ಅವಕಾಶವಿಲ್ಲ; ಕಸದತೊಟ್ಟಿಗೆ ವೈನು ಬೀರು ಸೀಸೆಗಳನ್ನು ಮುಂಜಾನೆ ಎಂಟರ ನಂತರವೇ ಎಸೆಯಬೇಕು; ಪರಿಚಯವಿಲ್ಲದ ಜನರ ಮುಖ ದಿಟ್ಟಿಸಬಾರದು ಮತ್ತು ಮಾತಿಗೆಳೆಯಬಾರದು, ಇತ್ಯಾದಿ. ಇವುಗಳಲ್ಲಿ ಕೊನೆಯ ತಾಕೀತು, ಮೇಲುಬಿದ್ದು ಮಾತಾಡುವ ಸೀಮೆಯಿಂದ ಹೋದ ನಮಗೆ ಅತ್ಯಗತ್ಯವಾಗಿತ್ತು. ಹಳ್ಳಿಯಿಂದ ಆಗಮಿಸಿದ್ದ ನಮ್ಮ ಭಾವನವರಿಗೆ ಹಂಪಿ ಪ್ರವಾಸಕ್ಕೆ ಕರೆದೊಯ್ದ ಪ್ರಸಂಗವು ನನಗೆ ನೆನಪಾಯಿತು. ಅವರು ವಿಜಯನಗರ ಸಾಮ್ರಾಜ್ಯದ ಚರಿತ್ರೆಗೂ ಶಿಲ್ಪಸೌಂದರ್ಯಕ್ಕೂ ಇನಿತೂ ಲಕ್ಷ್ಯಕೊಡದೆ, ಅಲ್ಲಿದ್ದ ಬಿಳಿಯ ಪ್ರವಾಸಿಗರ ಮುಖವನ್ನು ಮೃಗಾಲಯದ ಪ್ರಾಣಿಗಳ ತೆರದಿ ಅಚ್ಚರಿಯಿಂದ ನೋಡುತ್ತಲೇ ದಿನಗಳೆದರು. ಮಾತ್ರವಲ್ಲ, ‘ಅವರ ಕಡೆ ಮಳೆಬೆಳೆ ಹೇಗಿದೆ ವಿಚಾರಿಸು’ ಎಂದು ನನ್ನ ಪ್ರಾಣ ತಿಂದಿದ್ದರು. ಅವರ ಕಾಟ